## ಕಾವ್ಯಸಂಕ



**ಆರಿಫ್ ರಾಜಾ**

ಲ್ಯಾಟಿನ್ ಅಮೆರಿಕ, ಮಧ್ಯ ಪ್ರಾಚ್ಯ, ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾ ಸೇರಿದಂತೆ ವಿಶ್ವದ ವಿವಿಧ ಭಾಗಗಳಲ್ಲಿನ ಯುವ ಕವಯಿತ್ರಿಯರನ್ನು ಪರಿಚಯಿಸುವ ಹೊಸ ಮಾಲಿಕೆಯಿದು. ಕವಿಯ ಪುಟ್ಟ ಪರಿಚಯ ಹಾಗೂ ಕಿರು ಸಂದರ್ಶನದೊಡನೆ ಕೆಲವು ಕವಿತೆಗಳನ್ನೂ ಒಳಗೊಳ್ಳುವ ಈ ಮಾಲಿಕೆ, ಕನ್ನಡದ ಓದುಗರಿಗೆ ವಿಶ್ವದ ಬೇರೆ ಬೇರೆ ಭಾಗಗಳ ಕಾವ್ಯದ ಪರಿಮಳವನ್ನು ಪರಿಚಯಿಸಲಿದೆ.

ಕವಿ: **ಮರಿಯೆಲಾ ಕೊರ್ದೆರೊ**
ದೇಶ: **ವೆನೆಜುವೆಲಾ**



ವೃತ್ತಿಯಿಂದ ನ್ಯಾಯವಾದಿಯಾಗಿರುವ ಮರಿಯೆಲಾ ಕೊರ್ದೆರೊ (1985, ವೇಲೆನ್ಸಿಯ) ವೆನೆಜುವೆಲಾ ದೇಶದ ಯುವ ಕವಯಿತ್ರಿ, ಅನುವಾದಕಿ. The Body of doubt (2013), Transfigure a country you love (2020) ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸ್ಪ್ಯಾನಿಷ್ ನುಡಿಗಟ್ಟನಲ್ಲಿ ಹೊಸ ಬಗೆಯ ಮಾನಸಿಕ ತಂಗುದಾಣಗಳನ್ನು ಶೋಧಿಸುತ್ತಿರುವ ಪ್ರತಿಭಾವಂತೆ. ಮೊದಲ ನೋಟಕೆ ಮಿತವಾದ ಪದಬಳಕೆ, ಅಕ್ಷರಗಳ ನಡುವಿನ ಹದ ಮರಿಯೆಲಾ ಅವರ ಕಾವ್ಯದಲ್ಲಿ ಗಮನ ಸೆಳೆಯುತ್ತವೆ. ಮತ್ತೆ ಮತ್ತೆ ಮೌನದಲ್ಲಿ ಓದಿಕೊಳ್ಳಬೇಕಾದ ಮೆಲುದನಿಯ ಕವಿತೆಗಳಿವು ಅನಿಸಿ, ನಾವು ಓದುವ ಹಾಗೂ ಗ್ರಹಿಸುವ ಕ್ರಮದಲ್ಲಿ ಸೂಕ್ಷ್ಮ ಏರುಪೇರುಗಳು ಕಾಣಿಸಿಕೊಳ್ಳುತ್ತವೆ. 2014ರಲ್ಲಿ ಮರಿಯೆಲಾ ಅರ್ಜೆಂಟೀನಾ ದೇಶದ 'ಅಲೆಹಾಂದ್ರ ಪಿಜ್ಞಾರ್ನಿಕ್ ಅವಾರ್ಡ್' ಪಡೆದಿದ್ದಾರೆ. ಇವರ ಕವಿತೆಗಳು ಅನೇಕ ಅಂತರರಾಷ್ಟ್ರೀಯ ಜರ್ನಲ್, ನಿಯತಕಾಲಿಕೆ ಹಾಗೂ ಆ್ಯಂಥಾಲಜಿಗಳಲ್ಲಿ ಪ್ರಕಟವಾಗಿವೆ.